ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ

ಜನಪದ ಗೀತೆಗಳಲ್ಲಿ ಹೆಣ್ಣು : ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿನಿ

ಭಾಗ್ಯಜ್ಯೋತಿ ವಿ. ಜವಳಿ

ಮಾರ್ಗದರ್ಶಕರು

ಡಾ. ನಾರಾಯಣ ಬಿ. ಪವಾರ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ,

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,

ವಿಜಯಪುರ

ಕನ್ನಡ ವಿಷಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕಾಗಿ

ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

೨೦೨೫

ಪರಿವಿಡಿ

ಕ್ರ.ಸಂ.	ವಿಷಯ	ಪುಟ ಸಂಖ್ಯೆ
	ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ	೧-೩
೦೧	ಅಧ್ಯಾಯ-೧ ಜನಪದ ಗೀತೆಗಳ ಅರ್ಥ, ಸ್ವರೂಪ ಮತ್ತು ಅಧ್ಯಯನ ಪರಂಪರೆ	೪-೬
೦೨	ಅಧ್ಯಾಯ-೨ ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನ	೭-೯
೦೩	ಅಧ್ಯಾಯ-೩ ಜನಪದ ಗೀತೆಗಳಲ್ಲಿ ದಾಂಪತ್ಯ	೧೦-೧೪
೦೪	ಅಧ್ಯಾಯ-೪ ಜನಪದ ಗೀತೆಗಳಲ್ಲಿ ಹೆಣ್ಣಿನ ಪ್ರತಿಭಟನೆ	೧೫-೧೬
೦೫	ಅಧ್ಯಾಯ-೫ ಸಂಪ್ರದಾಯ ಆಚರಣೆಗಳ ಹಿನ್ನೆಲೆಯಲ್ಲಿ ಹೆಣ್ಣಿನ ಶೋಷಣೆ	೧೭-೧೮
೦೬	ಸಮಾರೋಪ	೧೯
೦೭	ಅಧ್ಯಯನದ ಫಲಿತಗಳು	೨೦
೦೮	ಗ್ರಂಥಋಣ	೨೧

ಪ್ರಸ್ತಾವನೆ:

ಹೆಣ್ಣನ್ನು ಕುರಿತು ಇತಿಹಾಸದ ಪುಟಗಳುದ್ದಕ್ಕೂ ಓದಿದ್ದೇವೆ. ಅವಳ ಸ್ಥಾನಮಾನಗಳ ಕುರಿತು ಕೇಳಿದ್ದೇವೆ. ಅವಳನ್ನು ಅಳೆಯುವ ಅಳತೆಗೋಲು ಇಲ್ಲವೆಂಬAತೆ ಹೆಣ್ಣು ಇತಿಹಾಸದುದ್ದಕ್ಕೂ ನಡೆದು ಬಂದಿದ್ದಾಳೆ. ತಾಯಿತನದ ಹಿರಿಮೆ ಅವಳನ್ನು ತ್ಯಾಗದ ಮೂರ್ತಿಯನ್ನಾಗಿಸಿದೆ. ಹೆಣ್ಣು ಪ್ರೀತಿ, ವಾತ್ಸಲ್ಯ, ತ್ಯಾಗ, ಅನುಕಂಪ ಮುಂತಾದವುಗಳ ಪ್ರತೀಕವಾಗಿ ಉಳಿದಿದ್ದಾಳೆ.

ಅಧ್ಯಯನದ ಉದ್ದೇಶ:

ಜಾನಪದ ಎಂದರೆ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ವಿರುದ್ಧ ಎಂಬ ಭಾವನೆಯಿದೆ. ಆದರೆ ಜಾನಪದಕ್ಕೆ ಅದರದ್ದೇ ಆದ ಒಂದು ವಿಶಿಷ್ಟ ಸ್ಥಾನವಿದೆ. ನಮ್ಮ ನಾಡಿನ ಯಾವುದೇ ಭಾಗದಲ್ಲೂ ಒಂದು ರೀತಿಯ ಜಾನಪದ ಸೊಗಡು ಇರುತ್ತದೆ. ದಾಖಲೀಕರಣದ ಮೂಲಕ ಮುಂದಿನ ಜನಾಂಗಕ್ಕೆ ಕೂಡಿಡುವುದು ಎಂಬ ತಿಳುವಳಿಕೆಯ ಚೌಕಟ್ಟಿನ ಆಚೆಗೂ ಜಾನಪದವನ್ನು ವಿಶಾಲ ಮನೋಭಾವದಲ್ಲಿ ಅರ್ಥೈಸಿಕೊಳ್ಳಬೇಕು ಎಂಬ ಉದ್ದೇಶದಿಂದ ಡಾ.ಎಸ್. ಬಾಲಾಜಿ ಸ್ನೇಹಿತರು ಸೇರಿಕೊಂಡು ಕನ್ನಡ ಜಾನಪದ ಪರಿಷತ್ ಸ್ಥಾಪಿಸಿದರು. ಆಧುನೀಕರಣ, ಜಾಗತೀಕರಣ ಪೂರ್ವದಲ್ಲಿ ಜಾನಪದ ಸಾಹಿತ್ಯ ಕಲೆಗಳನ್ನು ಉಳಿಸಲು ಈ ಕನ್ನಡ ಜಾನಪದ ಪರಿಷತ್ತನ್ನು ಅಸ್ತಿತ್ವಕ್ಕೆ ತರಲಾಗಿದೆ. ಜಾನಪದ ಕಲೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಮುಖ್ಯ ಉದ್ದೇಶವಾಗಿದೆ. ಕನ್ನಡ ಜಾನಪದ ಪರಿಷತ್ತು ಗ್ರಾಮಗಳಲ್ಲಿ ದೊರೆಯುವ ಪ್ರಾಚೀನ ವಸ್ತುಗಳು, ಗಾದೆ, ಒಗಟು, ಒಡಪು, ಅಡುಗೆ, ವೈದ್ಯ, ನಂಬಿಕೆ, ಹಬ್ಬಹರಿದಿನ, ಜನಪದ ಕಥೆ, ವೇಷಭೂಷಣ, ವೃತ್ತಿ ಬದುಕು ಕುರಿತು ದಾಖಲೀಕರಣ ಕರ್ಯವನ್ನು ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ನಡೆಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನದ ನಾನಾ ಮುಖಗಳನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಅಲ್ಲದೆ ಜನಪದವು ಗರತಿಯ ಜೀವನದ ಬಾಲ್ಯ, ಯೌವ್ವನ, ಮದುವೆ, ತವರುಮನೆ, ಗಂಡನಮನೆ, ಸವತಿಯ ಮತ್ಸರ, ಬಂಜೆತನದ ನೋವು, ಗೆಳತಿ, ಅಕ್ಕ-ತಂಗಿ, ಅಣ್ಣ-ತಮ್ಮಂದಿರು ಈ ಎಲ್ಲ ವಿಷಯಗಳ ಕುರಿತಾಗಿ ಸ್ತ್ರೀÀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಇದರ ಇನ್ನೊಂದು ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಜಾನಪದವು ಪೀಳಿಗೆಯಿಂದ ಪೀಳಿಗೆಗೆ ಹಾದು ಹೋಗುವ ನಂಬಿಕೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳ ಸಂಗ್ರಹವನ್ನು ಉಲ್ಲೇಖಿಸುವ ಪದವಾಗಿದೆ. ಜಾನಪದ ಅಧ್ಯಯನದಲ್ಲಿ ಸಂಪ್ರದಾಯದ ಮೇಲೆ ಪ್ರಾಥಮಿಕ ಒತ್ತು ನೀಡಲಾಗುತ್ತದೆ. ಜಾನಪದ ಅಧ್ಯಯನವು ಪುರಾಣಗಳು, ದಂತಕಥೆಗಳು, ಹಾಸ್ಯಗಳು, ಗಾದೆಗಳು, ಕಾಲ್ಪನಿಕ ಕಥೆಗಳು ಮತ್ತು ಜಾನಪದ ಕಥೆಗಳನ್ನು ಒಳಗೊಂಡಿದೆ. ಜಾನಪದವು ನನ್ನ ಸಂಶೋಧನಾ ಅಧ್ಯಯನದ ವ್ಯಾಪ್ತಿಯು

ಜನಪದ ಗೀತೆಗಳಿಗೆ ಸೀಮಿತವಾಗಿದೆ. ಗರತಿಯ ಹಾಡುಗಳಲ್ಲಿ, ಸೀಮಂತದ ಹಾಡುಗಳಲ್ಲಿ, ಶೋಬಾನೆ ಪದಗಳಲ್ಲಿ, ಬೀಸುವಕಲ್ಲಿನ ಪದಗಳಲ್ಲಿ, ಮದುವೆಯ ಹಾಡು ಮುಂತಾದವುಗಳಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಜೀವನದ ಬೇರೆ ಬೇರೆ ಅವಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಸೇರಿವೆ.

ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗರತಿಯ ಹಾಡಿಗೆ ವಿಶೇಷ ಸ್ಥಾನವಿದೆ. ಹೀಗಾಗಿ ನಾನು ಜನಪದ ಗೀತೆಗಳನ್ನು ಮಾತ್ರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಅಧ್ಯಯನದ ಮಹತ್ವ:

ಜಾನಪದವನ್ನು ಉಳಿಸುವ ನಿಟ್ಟಿನಲ್ಲಿ ಅದರ ಮಹತ್ವ ಮತ್ತು ಅಗತ್ಯವನ್ನು ಇಂದಿನ ಪೀಳಿಗೆಗೆ ತಿಳಿಸುವ ಕೆಲಸ ಆಗಬೇಕು ಜಾನಪದದ ಅಗತ್ಯ ಮತ್ತು ಮಹತ್ವದ ಬಗ್ಗೆ ಇಂದಿನ ಪೀಳಿಗೆಗೆ ಅರಿವಿಲ್ಲ. ಅವರು ಪಾಶ್ಚಾತ್ಯ ಸಂಸ್ಕೃತಿಯತ್ತ ವಾಲುತ್ತಿದ್ದಾರೆ. ಜಾನಪದದ ಮಹತ್ವ ಕುರಿತು ಮನದಟ್ಟಾಗುವಂತೆ ಅವರಿಗೆ ತಿಳಿಸಿದಲ್ಲಿ ಮತ್ತೆ ಸಂಸ್ಕೃತಿಯತ್ತ ಮರಳುತ್ತಾರೆ ಎಂದು ಅನೇಕ ಜಾನಪದ ವಿದ್ವಾಂಸರು ಹೇಳಿದ್ದಾರೆ.

ಜನಪದ ಗೀತೆಗಳನ್ನು ಅಧ್ಯಯನ ಮಾಡುವುದರಿಂದ ಹಳ್ಳಿಯ ಜನರ ಬದುಕಿನ ಪರಿಚಯವಾಗುತ್ತದೆ. ಅಲ್ಲಿರುವ ಮಾನವೀಯ ಸಂಬAಧಗಳ, ಜೀವನ ಮೌಲ್ಯಗಳ ಸಂಸ್ಕೃತಿಯ ಬಗ್ಗೆ ಪರಿಚಯವಾಗುತ್ತದೆ. ನಗರದ ಕಡೆಗೆ ಆಕರ್ಷಿತರಾಗುತ್ತಿರುವ ಇಂದಿನ ಯುವ ಪೀಳಿಗೆಗೆ ನಮ್ಮ ಪೂರ್ವಜರ ಬದುಕಿನ ಬಗ್ಗೆ ಅರಿವು ನಶಿಸುತ್ತಿದೆ. ಮಾನವೀಯ ಮೌಲ್ಯಗಳ ಬಗ್ಗೆ ಅರಿವು ಇರುವುದಿಲ್ಲ. ಜನಪದ ಗೀತೆಗಳ ಅಧ್ಯಯನದಿಂದ ಹಳ್ಳಿಯ ಜನರ ಬದುಕಿನ ನೈತಿಕ ಮೌಲ್ಯಗಳು ಮತ್ತು ಜೀವನದ ಅರ್ಥ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಜನಪದ ಗೀತೆಗಳ ಮಹತ್ವ ಏನೆಂದರೆ ಸಾವಿರಾರು ವರ್ಷಗಳ ಹಿಂದಿನ ಸಂಪ್ರದಾಯ, ಆಚರಣೆ, ಜೀವನ ವಿಧಾನಗಳು ಅದರಲ್ಲಿ ದಾಖಲುಗೊಂಡಿದೆ. ಇದನ್ನು ಉಳಿಸುವುದು ಅಧ್ಯಯನದ ಮಹತ್ವವಾಗಿದೆ.

ಅಧ್ಯಾಯ-೧. ಜನಪದ ಗೀತೆಗಳ ಅರ್ಥ, ಸ್ವರೂಪ ಮತ್ತು ಅಧ್ಯಯನ ಪರಂಪರೆ

ಅರ್ಥ:

ಜನಪದ ಸಾಹಿತ್ಯ Floklore ಎಂಬ ಶಬ್ದವು ಆಂಗ್ಲ ಭಾಷೆಯ ಪದವಾಗಿದ್ದು, ಎಲ್ಲ ಭಾಷೆಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಜನಪದ ಸಾಹಿತ್ಯವೆಂದರೆ ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವದು.

ಜನಪದ ಗೀತೆಗಳು ಎಂದರೆ ಹಳೆಯ ಕಾಲದಿಂದಲೂ ಹಳ್ಳಿಯ ಜನರು ಅನಕ್ಷರಸ್ಥರು ರೂಢಿಸಿಕೊಂಡು ಬಂದಿರುವ ಬಾಯಿಂದ ಬಾಯಿಗೆ ಯಾವುದೇ ಒಂದು ಹಾಡಿನ ಮೂಲಕ ವ್ಯಕ್ತಪಡಿಸುವ ಕ್ರಿಯೆಯೇ ಜನಪದ ಗೀತೆಗಳು ಎಂದು ಕರೆಯಲ್ಪಟ್ಟಿದೆ. ವಿವಿಧ ಹಾಡುಗಳನ್ನು ಹಾಡುವ ಪದ್ಧತಿ ಜನಪದ ಗೀತೆಗಳಲ್ಲಿ ವ್ಯಕ್ತವಾಗಿದೆ. ಜಾತ್ರೆ, ಉತ್ಸವಗಳಲ್ಲಿ ಜನರು ಸರದಾರ, ಸೇನಾಪತಿಗಳ ಮಂದಿರಗಳನ್ನು, ಅರಸರ ದರಬಾರಗಳನ್ನೂ ಸೇರಿ, ಹಾಡಿ ಮನರಂಜನೆ ಮಾಡುತ್ತಿದ್ದರು. ಕರ್ನಾಟಕದಲ್ಲಿ ಗೊಂದಲಿಗ ಹಾಡುಗಳನ್ನು ಹಾಡುವ ಜನರನ್ನು ಗೊಂದಲಿಗರು ಎಂದು ಕರೆಯುತ್ತಾರೆ.

ಸ್ವರೂಪ:

ಜನಪದ ಸಾಹಿತ್ಯ ಕಲೆ, ಆಚಾರ-ವಿಚಾರ ಮುಂತಾದವುಗಳಲ್ಲಿ ಕಂಡುಬರುತ್ತದೆ. ಕರ್ನಾಟಕ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ, ಡೊಳ್ಳು ಕುಣಿತ, ಕರಡಿ ಮಜಲು, ನಂದಿಕೋಲು ಕುಣಿತ ಇತ್ಯಾದಿ. ಕನ್ನಡ ಜಾನಪದ ಸಂಸ್ಕೃತಿಯ ಭಾಗವಾದ ಜನಪದ ಗೀತೆಗಳು ವೈವಿಧ್ಯಮಯವಾಗಿ ಕನ್ನಡನಾಡಿನಲ್ಲಿ ತನ್ನ ಪ್ರಾದೇಶಿಕ ಸೊಗಡು ಉಳಿಸಿದೆ. ಜನಪದ ಗೀತೆಗಳು ತನ್ನ ಮೂಲ ನೆಲೆಯಾದ ಹಳ್ಳಿಗಳಲ್ಲಿ ತನ್ನ ನೆಲೆ ಉಳಿಸಿಕೊಂಡಿರುವುದು.

ಜನಪದ ಗೀತೆಗಳಲ್ಲಿ ಕಂಸಾಳೆ ಪದ, ಗೀಗೀ ಪದ, ಕೋಲಾಟದ ಪದ, ರಾಗಿ ಬೀಸೊ ಪದ, ಸುಗ್ಗಿ ಹಾಡುಗಳು ಹೀಗೆ ಇನ್ನೂ ಅನೇಕ ಬಗೆಯ ಜಾನಪದ ಗೀತಿಗಳಿವೆ. ಜನಪದ ಗೀತೆಗಳು ನೂರಾರು ವರ್ಷಗಳಿಂದ ಜನರ ಬಾಯಿಂದ ಬಾಯಿಗೆ ಹರಿದು ಬರುವ ಹಾಡುಗಳು. ಹಳ್ಳಿಗಳಲ್ಲಿ ಹೆಚ್ಚಾಗಿ ಕಂಡುಬರುವ ಜನಪದ ಗೀತೆಗಳು ಜನರ ಮೆಚ್ಚುಗೆ ಪಡೆದುಕೊಂಡಿವೆ.

ಅಧ್ಯಯನ ಪರಂಪರೆ:

ಜಾನಪದ ಅಧ್ಯಯನ ಪರಂಪರೆಯು ಕರ್ನಾಟಕದಲ್ಲಿ ಅನೇಕ ತಲೆಮಾರುಗಳಿಂದ ಸಾಗಿ ಬಂದಿದೆ. ಜಾನಪದಕ್ಕೆ ಉತ್ತಮ ನಿದರ್ಶನ ಎಂದರೆ ಹಾವೇರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಶಿಗ್ಗಾಂವಿಯಿAದ ದೂರದಲ್ಲಿ ರಾಷ್ಟ್ರೀÃಯ ಹೆದ್ದಾರಿ-೪ ರಲ್ಲಿರುವ ಗೊಟಗೋಡಿ ಎಂಬಲ್ಲಿ ಜಾನಪದ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ. ಹಾವೇರಿ ಜಿಲ್ಲೆಯ ಶಿಗ್ಗಾಂವಿಯಲ್ಲಿ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ. ಜಾನಪದ ವಿಶ್ವವಿದ್ಯಾಲಯ ಜಾನಪದ ಅಧ್ಯಯನಕ್ಕೆ ವಿಸ್ತೃತ ನೆಲೆ ಗುರಿ ಸಾಧಿಸುವುದಕ್ಕೆ ಆರಂಭಗೊAಡಿದೆ.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧ ವಿದ್ವಾಂಸರಾದ ಡಾ. ಬಿ.ಎಸ್. ಗದ್ದಗಿಮಠ, ಡಾ. ಹಾ.ಮಾ. ನಾಯಕ, ಸಿಂಪಿ ಲಿಂಗಣ್ಣ, ಗೊರೂರು ರಾಮಸ್ವಾಮಿ, ಆರ್.ಸಿ. ಹಿರೇಮಠ ಮೊದಲಾದ ವಿದ್ವಾಂಸರು ಜಾನಪದ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಡಾ. ಬಿ.ಎಸ್. ಗದ್ದಗಿಮಠ:

ಜಾನಪದ ಕ್ಷೇತ್ರದಲ್ಲಿ ಸಂಶೋಧನೆಗೆ ನಾಂದಿ ಹಾಡಿ ಕ್ಷೇತ್ರಕರ್ಯ ಕೈಗೊಂಡು ವೈಜ್ಞಾನಿಕ ಹಾಗೂ ಶಾಸ್ತ್ರೀÃಯವಾಗಿ ವಿಶ್ಲೇಷಿಸಿ ಜಾನಪದ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಕೀರ್ತಿ ಡಾ.ಗದ್ದಗಿಮಠರಿಗೆ ಸಲ್ಲುತ್ತದೆ. ಕರ್ನಾಟಕ ವಿಶ್ವವಿದ್ಯಾಲಯವು ಇವರಿಗೆ ಡಾಕ್ಟರೇಟ ಪದವಿ ನೀಡಿ ಗೌರವಿಸಿದೆ. ಜಾನಪದ ಕ್ಷೇತ್ರದಲ್ಲಿ ಪಿ.ಹೆಚ್ . ಮಹಾಪ್ರಬಂಧವನ್ನು ರಚಿಸಿದ್ದಲ್ಲದೆ ಜನತಾ ಗೀತೆಗಳು, ಲೋಕ ಗೀತೆಗಳು, ಕಂಬಿಯ ಹಾಡು, ನಾಡಪದಗಳು ಎಂಬ ಕೃತಿಗಳನ್ನು ಪ್ರಕಟಿಸಿದರು. ಡಾ. ಬಿ.ಎಸ್. ಗದ್ದಗಿಮಠರು "ಕನ್ನಡ ಜಾನಪದ ಪಿತಾಮಹ" ಎಂದು ಹೆಸರು ಗಳಿಸಿದ್ದಾರೆ.

ಹಾ.ಮಾ. ನಾಯಕ:

ಡಾ. ಹಾ.ಮಾ. ನಾಯಕ ಅವರು ಕನ್ನಡದ ಖ್ಯಾತ ಕವಿ, ಅಂಕಣಕಾರ, ಭಾಷಾ ಶಾಸ್ತ್ರಜ್ಞ, ಜಾನಪದ ವಿದ್ವಾಂಸರು. ಹಾಮಾನಾ ಎಂದೇ ಪ್ರಸಿದ್ಧರಾಗಿದ್ದಾರೆ. ಇವರ ಹೆಸರು ಹಾರೊಗದ್ದೆ ಮಾನಪ್ಪ ನಾಯಕ. ಇವರು ಬರೆದ ಪ್ರಸಿದ್ಧ ಕೃತಿಗಳೆಂದರೆ, ಬಾಳನೋಟ, ಕನ್ನಡ ಸಾಹಿತ್ಯ ಚರಿತ್ರೆ, ಚಿನ್ನದಗರಿ, ಹಕ್ಕಿಯ ಪಯಣ, ಹಾವು ಮತ್ತು ಹೆಣ್ಣು "ಕನ್ನಡ ಜಾನಪದ ಗ್ರಂಥಸೂಚಿ" ಎಂಬ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ಹಾ.ಮಾ. ನಾಯಕರಿಗೆ ಲಭಿಸಿದ ಗೌರವ ಪುರಸ್ಕಾರಗಳು

- ಅಖಿಲ ಕರ್ನಾಟಕ ೨ನೇ ಜಾನಪದ ಸಮ್ಮೇಳನದ ಅಧ್ಯಕ್ಷತೆ (೧೯೬೯)
- ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷತೆ (೧೯೭೨)

- ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಪ್ರಶಸ್ತಿ (೧೯೮೦)

ಡಾ.ಆರ್.ಸಿ. ಹಿರೇಮಠ:

ಡಾ.ಆರ್.ಸಿ. ಹಿರೇಮಠರವರ ಪೂರ್ಣ ಹೆಸರು ರುದ್ರಯ್ಯ ಚಂದ್ರಯ್ಯ ಹಿರೇಮಠ. ಡಾ.ಆರ್.ಸಿ. ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳು ಹಾಗೂ ಪ್ರಸಿದ್ಧ ಜಾನಪದ ವಿದ್ವಾಂಸರು ಆಗಿದ್ದಾರೆ. ಡಾ.ಆರ್.ಸಿ. ಹಿರೇಮಠರು ೫೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆದವರು.

ಗೊರೂರು ರಾಮಸ್ವಾಮಿ ಐಯ್ಯಂಗಾರ:

ಗೊರೂರು ರಾಮಸ್ವಾಮಿ ಐಯ್ಯಂಗಾರ ರವರು ಪ್ರಬಂಧ, ಕಥೆ, ಕಾದಂಬರಿ, ವಿಮರ್ಶೆ, ಭಾಷಾಂತರ ಹೀಗೆ ಅನೇಕ ಪ್ರಕಾರಗಳಲ್ಲಿ ತಮ್ಮ ಕೊಡುಗೆ ಸಲ್ಲಿಸಿದ್ದಾರೆ. ಗಾಂಧಿವಾದಿ ಗೊರೂರರ ಜಾನಪದ ಪ್ರಜ್ಞೆ ಅದ್ಭುತವಾದುದು.

ಸಿಂಪಿ ಲಿಂಗಣ್ಣ:

"ಕರ್ನಾಟಕದ ಜಾನಪದ ರತ್ನ" ಜಾನಪದ ದಿಗ್ಗಜರು ಎಂದೇ ಖ್ಯಾತರಾದ ಸಿಂಪಿ ಲಿಂಗಣ್ಣನವರು ಪ್ರಮುಖ ಸಾಹಿತಿ ಹಾಗೂ ಜಾನಪದ ತಜ್ಞರು. ಇವರು ವಿಜಯಪುರ ಜಿಲ್ಲೆಯ ಚಡಚಣದಲ್ಲಿ ಜನಿಸಿದರು. ಸಿಂಪಿ ಲಿಂಗಣ್ಣನವರು ಶಿಕ್ಷಕರಾಗಿ, ಜಾನಪದ ವಿದ್ವಾಂಸರಾಗಿ, ಲೇಖಕರಾಗಿ ಮತ್ತು ಸಾಹಿತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಉತ್ತರ ಕರ್ನಾಟಕ ಜಾನಪದ ಕಥೆಗಳು ಎಂಬ ಪುಸ್ತಕ ಪ್ರಕಟಿಸಿದ್ದಾರೆ.

ಹೀಗೆ ಹಲವು ಪ್ರಮುಖ ಜಾನಪದ ವಿದ್ವಾಂಸರು ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಈ ರೀತಿಯಾಗಿ ಜನಪದ ಗೀತೆಗಳ ಅರ್ಥ, ಸ್ವರೂಪ ಹಾಗೂ ಅಧ್ಯಯನ ಪರಂಪರೆಯನ್ನು ವಿವರಿಸಬಹುದು.

ಅಧ್ಯಾಯ-೨. ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನ

ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನದ ವಿವಿಧ ಹಂತಗಳನ್ನು ಕಾಣಬಹುದು. ಹೆಣ್ಣು ಮಗುವಾಗಿ, ಮಗಳಾಗಿ, ಅತ್ತೆಯಾಗಿ, ಹೆಂಡತಿಯಾಗಿ, ಅಡಗೂಲಜ್ಜಿಯಾಗಿ ಹೀಗೆ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ಅಲ್ಲದೆ ಕೊಟ್ಟ ಮನೆಯ ವಂಶ ಬೆಳೆಸುವ ಗುರುತರವಾದ ಜವಾಬ್ದಾರಿ ಅವಳ ಮೇಲಿರುತ್ತದೆ.

ಅಕ್ಕ-ತಂಗಿಯಾಗಿ ಹೆಣ್ಣು

“ಅಕ್ಕ-ತಂಗಿಯರು ಮೇಲ ಮುತ್ತು ಮಾಣಿಕ ಮೇಲ

ಉತ್ತುರಿ ಸಾತಿ ಮಳಿ ಮೇಲ ನನ ತಮ್ಮ

ನೀಮೇಲ ನನ ಬೆಳಗಾಕ”

ಅಕ್ಕ-ತಂಗಿಯರ ಸಂಬAಧವು ಮಧುರವಾದುದು. ಅಕ್ಕ-ತಂಗಿಯರ ಬಾಂಧವ್ಯವನ್ನು ಮುತ್ತು ಮಾಣಿಕ್ಯವಿದ್ದಂತೆ ಎಂದು ಹೇಳಲಾಗಿದೆ.

ಮಗಳು-ಸೊಸೆಯಾಗಿ ಹೆಣ್ಣು

“ಮಲ್ಲಿಗೆಯಂಥ ಮಗಳಿಗೆ ಎಲ್ಲಿತ್ತೊ ಒಗೆತನ

ಹುಲ್ಲಾಗ ಬೆಂಕಿ ಒಗೆದಂಗ ಗುಡ್ಡದ

ಕಲ್ಲಿಗೆ ಧಾರೆ ಎರೆದಂಗ”

ಉತ್ತಮ ಹೆಣ್ಣುಮಗಳಿಗೆ ಹುಲ್ಲಿಗೆ ಬೆಂಕಿ ಒಗೆದಂತೆ ಮತ್ತು ಕಲ್ಲಿಗೆ ಧಾರೆ ಎರೆದು ಕೊಟ್ಟಂತೆ ಎಂದು ಹೇಳಲಾಗಿದೆ.

ಬೆಳೆದ ಹೆಣ್ಣುಮಗಳಿಗೆ ಒಳ್ಳೆಯ ಒಗೆತನ ಮತ್ತು ವರ ಸಿಕ್ಕರೆ ಅವಳ ಜೀವನ ಸುಗಮವಾಗುತ್ತದೆ. ಕೆಲವೊಮ್ಮೆ ಕೆಟ್ಟ ಒಗೆತನ ದೊರೆತು ಅವಳ ಬದುಕು ನರಕವಾಗುವುದುಂಟು. ಮೇಲಿನ ತ್ರಿಪದಿಯಲ್ಲಿ ಇಂಥ ಸಂದರ್ಭವನ್ನು ಹುಲ್ಲಿನ ಬಣವೆಗೆ ಬೆಂಕಿಬಿದ್ದAತೆ ಹಾಗೂ ಕಲ್ಲಿಗೆ ಧಾರೆ ಎರೆದು ಕೊಟ್ಟಂತೆ ಎಂದು ಹೇಳಿರುವುದು ಮರ್ಮ ಭೇದಕವಾಗಿದೆ.

ಗರತಿಯ ಹಾಡು ಈ ಕೃತಿಯು ಉತ್ತರ ಕರ್ನಾಟಕವನ್ನು ಅಷ್ಟೆ ಅಲ್ಲದೆ ಕರ್ನಾಟಕದ ಎಲ್ಲ ಓದುಗರ ಮತ್ತು ಸಾಹಿತಿಗಳ ಮನಸ್ಸನ್ನು ಸೂರೆಗೊಂಡಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಕೌಟುಂಬಿಕ ಜೀವನದ, ಹೆಣ್ಣು ಗಂಡಿನ ಮತ್ತು ಮಾನವ ಸಂಬAಧಗಳ ಅನಾವರಣವಿದೆ.

ತವರುಮನೆ, ಗಂಡನಮನೆ, ತಂದೆ-ತಾಯಿ ಮತ್ತು ಮಗಳ ಬಾಂಧವ್ಯ, ಅಣ್ಣ-ತಮ್ಮ, ಅಕ್ಕ-ತಂಗಿ, ಅತ್ತಿಗೆ-ನಾದಿನಿಯರ ಗೆಳತಿಯರ ಅನ್ಯೋನ್ಯ ಸಂಬAಧದ ಸಂಕಥನವಾಗಿದೆ. ಅತ್ತೆ ಮನೆಯ ಕಷ್ಟ, ಮನಸ್ತಾಪಗಳು, ಸತಿ-ಪತಿಯರ ಮಧ್ಯದ ಸರಸ-ವಿರಸ, ಬಂಜೆತನ, ವೈಧವ್ಯ ಮುಂತಾದ ಸಂಗತಿಗಳು ಈ ಗರತಿಯ ಹಾಡಿನಲ್ಲಿ ಪರಿಣಾಮಕಾರಿಯಾಗಿ ಚಿತ್ರಣಗೊಂಡಿದೆ. ಈ ಗರತಿಯ ಹಾಡಿನಲ್ಲಿ ಶೃಂಗಾರ, ಹಾಸ್ಯ, ಕ್ರೋಧ ಮೊದಲಾದ ರಸಗಳು ಮಿಳಿತಗೊಂಡಿವೆ.

ಬಾಲ್ಯ ಕಳೆದು ಯೌವನಕ್ಕೆ ಕಾಲಿಟ್ಟಾಗ ಹೆಣ್ಣಿನ ಜೀವನದಲ್ಲಿ ಬಹುದೊಡ್ಡ ತಿರುವು ಉಂಟಾಗುತ್ತದೆ. ಹುಟ್ಟಿ ಬೆಳೆದ ಮನೆಯನ್ನು ತೊರೆದು ಹಡೆದ ತಂದೆ-ತಾಯಿಗಳನ್ನು, ಜೊತೆಯಲ್ಲಿ ಬೆಳೆದ ಅಣ್ಣ-ತಮ್ಮಂದಿರನ್ನು, ಗೆಳತಿಯರನ್ನು ಬಿಟ್ಟು ಗಂಡನ ಮನೆಗೆ ಹೋಗಬೇಕಾದ ಅನಿವರ್ಾಯತೆ ಇರುತ್ತದೆ. ಈ ಅಗಲಿಕೆಯ ಚಿತ್ರಣವು ಗರತಿಯ ಹಾಡುಗಳಲ್ಲಿ ಅತ್ಯಂತ ಕಾವ್ಯಾತ್ಮಕವಾಗಿ ಮೂಡಿಬಂದಿದೆ. ಇದು ಹೆಣ್ಣಿನ ತ್ಯಾಗದ ಮೊದಲ ಘಟ್ಟ ಆರಂಭವಾಗುತ್ತದೆ. ಕೊಟ್ಟ ಮನೆಯ ಸೊಸೆಯಾಗಿ ಅವರ ವಂಶ ಬೆಳೆಸುವದು.

ಕುಟುಂಬದ ಎಲ್ಲರ ಜೀವನ ಪ್ರೀತಿಗೆ ಪಾತ್ರಳಾಗುತ್ತಾಳೆ, ಗಂಡನ ಮನೆಯಲ್ಲಿ ಅತ್ತೆ-ಮಾವ, ನಾದಿನಿ ಮೊದಲಾದವರ ಸಂಬAಧಗಳನ್ನು ಕಾಯ್ದುಕೊಂಡು ಹೋಗಬೇಕಾದ ಜವಾಬ್ದಾರಿ ನಿಭಾಯಿಸುತ್ತಾಳೆ. “ಗಂಜಿಯ ಕುಡಿದರೂ ಗಂಡನ ಮನೆ ಲೇಸು” ಎಂದು ಕಷ್ಟಗಳನ್ನು ಸಹಿಸಿಕೊಂಡು ಬಾಳುತ್ತಾಳೆ. ತಾಯಿಯ ನೆನಪು ಕಾಡಿದಾಗ ಅದನ್ನು ಹಾಡಾಗಿಸಿ ದುಃಖವನ್ನು ಮರೆಯುತ್ತಾಳೆ.

ಕಾಸೀಗಿ ಹೋಗಲಕ್ಕ ಏಸೊಂದು ದಿನಬೇಕು |

ತಾಸೊತ್ತಿನ್ಹಾದಿ ತವರೂರ | ಮನೆಯಾಗ |

ಕಾಸೀ ಕುಂತಾಳ ಹಡೆದವ್ವ | (೫೬)

ತಾಯಿ ಕಟ್ಟಿದ ಬುತ್ತಿ ತರತರದ ಯಾಲಕ್ಕಿ |

ಜರತರದ ಜಾಣೆ ಹಡೆದವ್ವ | ನಿನಬುತ್ತಿ |

ಬಿಚ್ಚುರ್ಯಂಡೆ ಭೀಮಾರತಿ ಮ್ಯಾಲ |

ಹೀಗೆ ಗರತಿ ತನ್ನ ಎಲ್ಲ ದುಃಖ ದುಮ್ಮಾನಗಳನ್ನು ಹಾಡಿ ಮರೆಯುತ್ತಾಳೆ. ಈ ಗರತಿಯ ಹಾಡಿನಲ್ಲಿ ೮೦೦ ತ್ರಿಪದಿಗಳಿವೆ. ಈ ತ್ರಿಪದಿಗಳಲ್ಲಿ ತಾಯಿ-ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿ, ಅತ್ತೆ-ನಾದಿನಿ, ಭಾವ-ಮೈದುನ ಮೊದಲಾದ ಕುಟುಂಬ ಸಂಬAಧಗಳ ಕುರಿತು ಈ ತ್ರಿಪದಿಗಳಲ್ಲಿ ಹಾಡು ಹೊನಲಾಗಿ ಹರಿದಿದೆ. ಖ್ಯಾತ ಜನಪದ ಸಾಹಿತಿ ಸಿಂಪಿ ಲಿಂಗಣ್ಣನವರು ಗರತಿಯ ಕುರಿತು ಹೀಗೆ ಹೇಳಿದ್ದಾರೆ. ಗರತಿಯು ತ್ಯಾಗದ ಪುತ್ಥಳಿ, ತನ್ನವರೆಂದರೆ ಆಕೆಗೆ ಮಮತೆಯ ಚಿನ್ನ, ಪತಿಗೆ

ಅರ್ಧಾಂಗಿಯಾಗಿ ಕೊಡುವಳು. ಮಕ್ಕಳಿಗೆ ರಕ್ತರಸಗಳನ್ನು ದಾನವಾಗಿ ಕೊಡುವಳು, ಹುಟ್ಟಿದ ಮನೆಗೆ ಎರವಾಗಿ ಕೊಟ್ಟ ಮನೆಗೆ ಹೆಸರಾಗುವಳು. ಹಾಡುತ್ತಲೇ ದುಡಿಯುವಳು, ಆಸರಿಕೆ ಅಳೆದಿಟ್ಟುವಳು, ಬೇಸರಿಕೆ ಬಳಿದಿಟ್ಟವಳು, ಆಕೆಯ ತ್ಯಾಗಕ್ಕೆ ಇದಕ್ಕಿಂತಲೂ ಹೆಚ್ಚಿನ ಉದಾಹರಣೆಗಳು ಇನ್ನೇನು ಬೇಕು?

ಹಾಲುಂಡ ತವರಿಗಿ ಏನೆಂದು ಹಾಡಲೆ

ಹೊಳೆದಂಡಿಲಿರುವ ಕರಕೀಯ | ಕುಡಿಯಂಗ |

ಹಬ್ಬಲೀ ಅವರ ರಸಬಳ್ಳಿ ||

ತಂದೀನ ನೆನೆದರ ತಂಗುಳ ಬಿಸಿಯಾಯ್ತು |

ಗಂಗಾದೇವಿ ನನ್ನ ಹಡೆದವ್ವನ | ನೆನೆದರ |

ಮಾಸೀದ ತಲೆಯು ಮುಡಿಯಾಯ್ತು ||

ಈ ಎಲ್ಲ ತ್ರಿಪದಿಗಳಲ್ಲಿ ಹೆಣ್ಣಿನ ಭಾವನೆಗಳು ನಾನಾ ರೀತಿಯ ರಸಭಾವಗಳಿಂದ ಅಭಿವ್ಯಕ್ತಗೊಂಡಿವೆ. ಈ ಕೃತಿಯು ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಜನಪದ ಸಾಹಿತ್ಯದಲ್ಲಿ ಅಮರಗೀತೆಗಳ ಸಂಕಲನವಾಗಿದೆ. ಗ್ರಾಮೀಣ ಬದುಕಿನ ನಾನಾ ಮುಖಗಳನ್ನು ಇಲ್ಲಿ ಅನಾವರಣಗೊಳಿಸಿದೆ. ಪ್ರಾದೇಶಿಕ ಅಂಶಗಳು ಯಥೇಚ್ಛವಾಗಿ ಮೂಡಿಬಂದಿವೆ.

ಅಧ್ಯಾಯ-೩. ಜನಪದ ಗೀತೆಗಳಲ್ಲಿ ದಾಂಪತ್ಯ

ಹೆಣ್ಣು ಒಬ್ಬಳು ಮದುವೆಯಾಗಿ ಗಂಡನ ಮನೆಯಲ್ಲಿ ಅತ್ತೆ ನಾದಿನಿಯರ ಕಾಟ ಸಹಿಸಿಕೊಂಡು ಹೋಗುವಳು. ಗರತಿಯಾದ ಹೆಣ್ಣಿನ ಜೀವನ ಗಂಡನ ಮನೆಯಲ್ಲಿ ಹಲವು ಕಷ್ಟಗಳಿದ್ದರೂ ಅವಳು ಪತಿಯೇ ಪರದೈವ ಎಂದು ನಂಬಿರುತ್ತಾಳೆ.

ಅಡಗಿಯ ಮನಿಯಾಗ ಮಡದೀಯ ಸುಳಿವಿಲ್ಲ

ಅಡಗಿ ಬಾಯಿಗೆ ರುಚಿಯಿಲ್ಲ ಹಡೆದವ್ವ

ಮಡದಿ ತವರಿಗೆ ಹೋಗ್ಯಾಳ

ಗಂಡನು ತನ್ನ ಬೇಸರ ವ್ಯಕ್ತಪಡಿಸುತ್ತ ಹೆಂಡತಿ ಕುರಿತು ತನ್ನ ತಾಯಿಗೆ ಈ ಮಾತು ಹೇಳುವನು

ಗಂಡ ಹೆಂಡಿರ ಜಗಳ ಗಂಧ ತೀಡಿದಾಂಗ

ನಿAಗಕ ನೀರು ಎರೆದಾಂಗ ಹಿರಿ ಹೊಳೆಯ

ಗಂಗವ್ವ ಸಾಗಿ ಹರಿದಂಗ

ಗAಡನ ಮನೆಯಲ್ಲಿ ಗರತಿಯ ಜೀವನ ಪರಿಶುದ್ದವಾದುದು. ಗಂಡ-ಹೆAಡತಿಯಲ್ಲಿ ಜಗಳವಿದ್ದರೂ ಗಂಧ ತೀಡಿದಂತೆ ಇರುವದು ಎಂದು ತ್ರಿಪದಿ ಹೇಳುತ್ತದೆ.

ಈ ಕೃತಿಯಲ್ಲಿ ಹೆಣ್ಣಿನ ಜೀವನದ ಕಷ್ಟಸುಖ, ನೋವು-ನಲಿವು, ಸಂಕಟ ಎಲ್ಲವೂ ಅನಾವರಣಗೊಂಡಿದೆ. ಗಂಡನ ಮನೆ ಅವಳಿಗೆ ಕೆಲವು ಬಾರಿ ಸುಖದ ಸುಪ್ಪತ್ತಿಗೆಯಾಗದೇ ಕಷ್ಟದ ಕೋಟಲೆಯು ಆಗಿದೆ. ಅವಳಿಗೆ ಸರಿಜೋಡಿ ಪತಿ ಸಿಗದೇ ಶೋಷಣೆಗೆ ಒಳಗಾದ ಪ್ರಸಂಗಗಳು ಸಾಕಷ್ಟಿವೆ. ತಾಯಿ-ಮಗಳು ಹಾಗೂ ಗೆಳತಿಯರ ಕುರಿತ ನೆನಪುಗಳು ಗರತಿಯ ಹಾಡಿನಲ್ಲಿ ಹಾಸು ಹೊಕ್ಕಾಗಿವೆ. ಅಸಮ ದಾಂಪತ್ಯದ ಕಷ್ಟ ಎಂಥದ್ದೆAದು ಈ ತ್ರಿಪದಿಯಲ್ಲಿ ವ್ಯಕ್ತಗೊಂಡಿದೆ.

ಅತ್ತಿಯ ಮನಿಯಾಗ ಅರವತ್ತು ಗಂಗಾಳ |

ಬೆಳಗತೇನತ್ತಿ ಬೈಬ್ಯಾಡ | ತವರವರು |

ಸರಮುತ್ತ ಮಾಡಿ ಸಲವ್ಯಾರ ||

ಗೋಕುಲದಂಥ ಗಂಡನ ಮನೆಯ ಸುಖವನ್ನು ನೆನೆದು ಗರತಿ ಹೀಗೆ ಹಾಡಿದ್ದಾಳೆ

ಆಕಳಂಥಾ ಅತ್ತಿ ಗೋಕುಲದಂಥಾ ಮಾವ |

ಶ್ರೀಕೃಷ್ಣನಂಥ ಪತಿರಾಯ | ನಿದ್ವರ |

ಸಾಕೀದ ತವರ ಮರೆತೇನ ||

ಹಣ್ಣು ಮೆಣಸಿನಕಾಯಿ ಕಣ್ಣಿಗೀ ಕೆಂಪಗ |

ಸಣ್ಣ ಏನ ನೆ/ಗೆಣ್ಣಿ | ಆಕೀ ಮಾತು |

ಬೆಣ್ಣಾೀಯಗ ಮುಳ್ಳ ಮುರಿದಂಗ

ಮನಸ್ತಾಪ

ನೇಗಣ್ಣಿ ಮಗ ಬಂದು ನಗುತ ತೊಡೆಯಲಿ ಕೂತ |

ಇಳಿಯೋ ಕಂದಯ್ಯ ತೆಳಿಯಾಕ | ನಿಮ್ಮವ್ವ |

ಸನುಮನಿಕೆ ಇಲ್ಲಾ ನನಗೂಡ ||

ಕುಟುಂಬದಲ್ಲಿ ಭಾವ-ಮೈದುನರ ಹೆಂಡತಿಯರಲ್ಲಿ ಮನಸ್ತಾಪ ಉಂಟಾಗಿ ಅರಿಯದ ಹಸುಳೆಯೊಂದು ಮೈದುನನ ಹೆಂಡತಿಯ ತೊಡೆ ಮೇಲೆ ಬಂದು ಕುಳಿತಾಗ ಹೇಳಿಕೊಳ್ಳದ, ಹೇಳದೇ ಇಂಥ ಅನುಭವಿಸುವ ಸಂಕಟ ಈ ತ್ರಿಪದಿಯಲ್ಲಿ ಪರಿಣಾಮಕಾರಿಯಾಗಿ ಮೂಡಿ ನಿಂತಿದೆ. ಕುಟುಂಬ ಸಂಬAಧಗಳು ಹೀಗೆ ವಿರಸದ ಸಂದರ್ಭಗಳನ್ನು ಸೃಷ್ಟಿಸಿದಾಗ ಹೆಣ್ಣು ಪಡುವ ವೇದನೆ ಅನನ್ಯವಾಗಿದೆ.

ಉಂಡರುಟ್ವರು ಸೇರ ಮಂಡೆಬಾಚರು ಸೇರ |

ಗಂಡನಲ್ಲ ಕಾಣೋದು

ಕೆಂಡನAಥ ಮೂಡೋ ರಘುರಾಮಾ |

ರಾಯ ಬರುತಾರಂತ ರಾತ್ರಿಲಿ ನೀರಟ್ಟ |

ರನ್ನ ಬಚ್ಚಲಕ ಮಣಿ ಹಾಕಿ | ಕೇಳೇನ |

ಸಣ್ಣವಳ ಮ್ಯಾಲ ಸವತ್ಯಾಕ |

ಅಂಗಿಯ ಮ್ಯಾಲಂಗಿ ಛಂದೇನೊ ನನ್ನ ರಾಯ |

ರಂಬಿ ಮ್ಯಾಲ ರಂಬಿ ಪ್ರತಿರಂಬಿ | ಬಂದರ |

ಛಂದೇನೊ ರಾಯ | ಮನಿಯಾಗ ||

ಹೆಣ್ಣಿನ ಉದಾರತೆ:

ನಕ್ಕರ ನಗಲೆವ್ವ ನಗೆಮುಖದ ಕ್ಯಾದಿಗಿ |

ನಾಮುಚ್ಚಿ ಮುಡಿವ ಪರಿಮಳ | ದಾಹೂವ |

ಅವಳೊಂದ ಬಾರಿ ಮುಡಿಯಲಿ | ಮುಡಿಯಲಿ ||

ಈ ಗರತಿಯ ಹಾಡು ಸಂಗ್ರಹದಲ್ಲಿ ನೀತಿ ಧರ್ಮದ ಜೊತೆಗೆ ಅನೀತಿಯ ಬಗ್ಗೆಯೂ ಹೇಳಲಾಗಿದೆ. ಸವತಿ ಮತ್ಸರ, ಮಲತಾಯಿ ಮತ್ತು ಮಲಮಕ್ಕಳು, ಅಸಮ ದಾಂಪತ್ಯ ವಿಧವೆ, ಬಂಜೆ ಮೊದಲಾದ ಸಮಸ್ಯೆಗಳು ಗರತಿ ಹಾಡಿನಲ್ಲಿ ಹೊನಲಾಗಿ ಹರಿದಿವೆ.

ಒಬ್ಬ ಹುಡುಗ ಮಾವನ ಮಗಳನ್ನು ನೋಡುತ್ತಾನೆ, ಆ ಹುಡುಗಿ ಸೌಂದರ್ಯವತಿಯಾಗಿದ್ದಾಳೆ ಹುಡುಗನ ಮನ ಅಪಹರಿಸುತ್ತಾಳೆ. 'ಗಂಧದ ನೆರಿಗ್ಯೊಳೆ, ಬೆಂಗಳೂರಿನ ರವಿಕೆಯೋಳೆ, ಹೆಗಲೇರಿದ ಹೂವಿನ ಮಾಲೆಯೋಳೆ' ಎಂದು ಸೆರಗ ಹಿಡಿಯುತ್ತಾನೆ.

ಸೀರೆ ಸೆರಗ ಬಿಡೋ

ಸೀರೆ ಸೆರಗ ಬಿಡೋ ನನಗೆಳೆಯಾ

ಸೀರೆ ಸೆರಗ ಬಿಡೋ

ಆದರೆ ಹೆಣ್ಣಿನ ವೈಯ್ಯಾರವನ್ನು ಕಂಡು ಮರುಳಾದ ಗೆಳೆಯ ಸುಲಭವಾಗಿ ಹೆಣ್ಣನ್ನು ಹೊಗಳಿಯೇ ಹೊಗಳುತ್ತಾನೆ.

ಮಾವನ ಮಗಳೇ ಕೋಗಿಲೆ ದನಿಯೋಳೆ

ತಾವರೆ ಮೊಗ್ಗಿನ ಮೊಗದವಳೇ

ಬಾಯಾರಿ ಬಂದೆ ನೀರ್ ಕೊಡೆ

ಒಳ್ಳೆಯ ಹೆಣ್ಣನ್ನು ನೋಡಿದಾಗ ಎಲ್ಲಾ ಗಂಡುಗಳೂ ಹೇಳುವ ಮಾತು ಅವಳು ಹೀಗೆ ಪ್ರತ್ಯುತ್ತರ ಕೊಡುತ್ತಾಳೆ.

ನೀರ ಕೊಡುವೋಕೆ ನಾನ್ಯಾರೋ ನೀನ್ಯಾರೋ

ಹೋಗಯ್ಯ ಹರಿಯೊ ಹೊಳೆಗಾಗಿ ಗೆಳೆಯಾ

ಹರಿಯೋ ನೀರ್ ಹೆಚ್ಚಿಗೆ ಕೆರೆಯ ನೀರ ಬೆಚ್ಚಗೆ

ನೀ ಕೊಟ್ಟ ನೀರು ಸಮರುಚಿ

ಎಂಬುದು ಇಲ್ಲಿ ವ್ಯಕ್ತಪಡಿಸಿದೆ.

ಆದರೆ ಪ್ರಾಯಕ್ಕೆ ಬಂದ ಹೆಣ್ಣು ಮತ್ತೊಬ್ಬ ಗಂಡಿಗೆ ನೀರು ಕೊಟ್ಟರೆ ಊರವರು ಸುಮ್ಮನೇ ಬಿಡುತ್ತಾರೆಯೇ ಎಂಬುದು ಇಲ್ಲಿ ವ್ಯಕ್ತವಾಗಿದೆ.

ನಾಕೊಟ್ಟ ನೀರು ಸಮರುಚಿಯಾದರೆ

ಕುಲದಾಗೆ ದಂಡ ಬರುತೈತೆ ಗೆಳೆಯಾ

ಆದರೆ ಇನ್ನೂ ಮದುವೆ ಆಗದ ತರುಣ ಯಾವುದಕ್ಕೂ ಹೆದರದೇ ಇರುತ್ತಾನೆ.

ದಂಡವ ಕೊಟ್ಟೇನು ಹಿಂಡೆಮ್ಮೆ ಹೊಡೆಸೇನು

ಬಂಡೀಲಿ ಬದುಕ ಕಳುಹೇನು | ಮಾವನ ಮಗಳೇ

ಬಂದೀಯ ತೋಳ ಬಿಡಲಾರೆ

ಗೆಳೆಯ ಹೆಣ್ಣನ್ನು ಕುಂಜರದ ಬೊಂಬೆ, ಕುಶಲದ ಬೊಂಬೆ ಎಂದು ಪುಸಲಾಯಿಸುತ್ತಾನೆ. ಹುಡುಗಿ ಬರೀ ದಂಡ ಕೊಟ್ಟರೆ ಸಾಲದು, ಕುಲದವರು ಮೈಸುಲಿಯುತ್ತಾರೆ ಎನ್ನುತ್ತಾಳೆ. ಗೆಳೆಯ ಆ ಬೆದರಿಕೆಗೂ ಹೆದರುವುದಿಲ್ಲ.

ಈ ಬಾಳಿನಲ್ಲಿ ಪ್ರೇಮ ಜೀವನವೂ ಇದೆ, ಕಾಮ ಜೀವನವೂ ಇದೆ. ಆದರೆ ಜೀವನದ ತಿರುಳು ಇದಲ್ಲ ಎಂಬ ಗ್ರಹಿಕೆಯೂ ಇದೆ. ಪ್ರೇಮವು ಜೀವನದಲ್ಲಿ ಹೆಚ್ಚು ಭಾಗ ಹಾಗೂ ಮುಖ್ಯವಾದುದು. ಆದರೆ ಪ್ರೇಮವೇ ಬರೀ ಜೀವನವಲ್ಲ. ಸ್ತ್ರೀÃ ಪುರುಷರ ಪರಸ್ಪರ ಸಂಬAಧದಲ್ಲಿ ಜೀವನ ದಿಶೆಯಿದೆ, ಧರ್ಮ ಪ್ರವೃತ್ತಿ ತುಂಬಿದೆ.

ಮದುವೆಯಾಗುವುದಕ್ಕೆ ಮುಂಚೆ ಮತ್ತು ಮದುವೆಯಾದ ಮೇಲೂ ಹಳ್ಳಿಯ ಗಂಡು ಹೆಣ್ಣಿನ ಬಾಳ್ವೆಯಲ್ಲಿ ಈ ಹಾಸ್ಯ ಹೆಚ್ಚು ಕಂಡುಬAದಿದೆ. ಹುಡುಗನು ಹುಡುಗಿಯನ್ನು ಬೇಟೆಯಾಡುವ ಚಾತರ್ಯದಿಂದ ಅವಳೊಂದಿಗೆ ಮಾತನಾಡುವ, ಮಾತಿಗೆ ಕೊಟ್ಟು ಮಾತಿನಲ್ಲಿ ಸೋಲಿಸುವ ಮಾತುಗಳು ಹಳ್ಳಿಯ ಸರಳ ಜೀವನದ ಜೀವಾಳ. ಈ ಮಾತುಗಳನ್ನಾಡುವ ಹಳ್ಳಿಯ ಹೆಣ್ಣು-ಗಂಡುಗಳು ಮಾತಿನ ಸ್ವಾರಸ್ಯಕ್ಕಾಗಿಯೇ ಹಾಡುತ್ತಾರೆ. ಈ ಹಾಸ್ಯ ಶೃಂಗಾರ ಕೇವಲ

ಮದುವೆಯಲ್ಲಿ ಕುಳಿತು ಹೇಳುವ ರಹಸ್ಯವಲ್ಲ. ಕಾವ್ಯವಾಹಿನಿಯಿಂದ ಕೇಳಿದವರಿಗೆ ಹೆಣ್ಣು-ಗಂಡುಗಳು ಬಯಲಿನಲ್ಲಿ ದನ ಕಾಯುವಲ್ಲಿಯೂ, ಗದ್ದೆ ನೆಡುವಾಗ, ಹೊಲ ಕುಯ್ಯುವಾಗಲೂ ಹೇಳಿಕೊಳ್ಳುವ ಮಾತಿನ ಕತ್ತಿ ವರಸೆ ಆಗಿದೆ.

ಈ ರೀತಿಯಾಗಿ ಜನಪದ ಗೀತೆಗಳಲ್ಲಿ ಹೆಣ್ಣಿನ ದಾಂಪತ್ಯದ ವಿವಿಧ ಮಜಲುಗಳನ್ನು ಕಾಣುತ್ತೇವೆ. ಹೆಣ್ಣಿನ ನಾನಾ ಮುಖಗಳು ಜನಪದ ಗೀತೆಗಳಲ್ಲಿ ಕಂಡು ಬಂದಿದೆ ಹಾಗೂ ದಾಂಪತ್ಯವನ್ನು ವಿವರಿಸಬಹುದು.

ಅಧ್ಯಾಯ-೪. ಜನಪದ ಗೀತೆಗಳಲ್ಲಿ ಹೆಣ್ಣಿನ ಪ್ರತಿಭಟನೆ

ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನದ ಕಷ್ಟಸುಖ, ನೋವು-ನಲಿವು, ಸಂಕಟ ಎಲ್ಲವೂ ಅನಾವರಣಗೊಂಡಿದೆ. ಗಂಡನ ಮನೆ ಅವಳಿಗೆ ಕೆಲವು ಬಾರಿ ಕಷ್ಟದ ಕೋಟಲೆಯಾಗಿ ಪರಿಣಮಿಸಿದೆ. ಒಳ್ಳೆಯ ಗಂಡ ಸಿಗದೇ ಹೆಣ್ಣು ಶೋಷಣೆಗೆ ಒಳಗಾದ ಪ್ರಸಂಗಗಳು ಸಾಕಷ್ಟಿವೆ. ಇಂಥ ಸಂದರ್ಭದಲ್ಲಿ ಅವಳ ಪ್ರತಿಭಟನೆ ಸ್ಫೋಟಗೊಂಡಿದೆ

ಅತ್ತಿಯ ಮನಿಯಾಗ ಅರವತ್ತು ಗಂಗಾಳ |

ಬೆಳಗತೇನತ್ತಿ ಬೈಬ್ಯಾಡ | ತವರುವರು |

ಸರಮುತ್ತ ಮಾಡಿ ಸಲವ್ಯಾರ ||

ಅವಿಭಕ್ತ ಕುಟುಂಬದಲ್ಲಿ ಹೆಣ್ಣು ಎಲ್ಲ ಜವಾಬ್ದಾರಿ ನಿಭಾಯಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಕೊಲವೊಮ್ಮೆ ಮನೆಯ ಕೆಲಸದಲ್ಲಿ ವಿಳಂಬವಾದರೆ ಅತ್ತೆಯಿಂದ ಬೈಸಿಕೊಳ್ಳಬೇಕಾಗುತ್ತದೆ. ತವರುಮನೆಯಲ್ಲಿ ಮುದ್ದಾಗಿ ಬೆಳೆದ ಹೆಣ್ಣುಮಗಳಿಗೆ ಬಂದ ಸಂಕಟವನ್ನು ಅವಳು ಮೇಲಿನ ತ್ರಿಪದಿಯಲ್ಲಿ ತೋಡಿಕೊಂಡಿದ್ದಾಳೆ. ಇಲ್ಲಿ ತವರುಮನೆಯ ನೆನಪು ಸಂಕಟವಾಗಿ ಪರಿಣಮಿಸುತ್ತದೆ.

ಕುಟುಂಬ ಸಂಬAಧಗಳು ವಿರಸದ ಸಂದರ್ಭಗಳನ್ನು ಸೃಷ್ಟಿಸಿದಾಗ ಹೆಣ್ಣು ಪಡುವ ವೇದನೆ ಅನನ್ಯವಾಗಿದೆ. ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನದ ಹಲವು ಹಂತಗಳಲ್ಲಿ ಕಂಡುಬರುವ ಅಸಮ ದಾಂಪತ್ಯ, ವಿಧವೆ ಜೀವನ, ಬಂಜೆತನ ಮೊದಲಾದ ಸಮಸ್ಯೆಗಳಲ್ಲಿ ಹೆಣ್ಣಿನ ಪ್ರತಿಭಟನೆಯನ್ನು ಕಾಣಬಹುದು.

ಹೆಣ್ಣು ಹುಟ್ಟಿದ ಕಾಲದಿಂದಲೂ ಒಳ್ಳೆಯ ಮನೆಗೆ ಕೊಡಬೇಕೆಂದು ತಂದೆ-ತಾಯಿಗಳ ಯೋಚನೆಯಾಗಿರುತ್ತದೆ. ಹೆಣ್ಣು ಹುಟ್ಟಿದಾಗಿನಿಂದ ಹಿಡಿದು ಮದುವೆಯಾಗಿ ಅವಳು ಗಂಡನ ಮನೆ ಸೇರಿ ಬಾಳಲು ಪ್ರಾರಂಭಿಸುವವರೆಗೆ ಚಿಂತೆ ಇರುತ್ತದೆ. ಹೆಣ್ಣು ಹುಟ್ಟಿತು ಎಂದು ಹೇಳಿ ಕಳುಹಿಸಬೇಡ, ಹೆಣ್ಣು ಎಂದರೆ ಅವರು ಹೆದರುತ್ತಾರೆ. ಹೆಣ್ಣು ಹುಟ್ಟಿದ ಮನೆಗೆ ಹೆಗ್ಗಣ ಹತ್ತಿದಂತೆ, ಹೆಣ್ಣಿಗೆ ಸರಿಯಾದ ವರ ಸಿಕ್ಕದಿದ್ದರೆ ತಂದೆ-ತಾಯಿಗಳಿಗೆ ಅದಕ್ಕಿಂತ ಹೆಚ್ಚಿನ ದುಃಖವಿಲ್ಲ.

ಒನಕೆ ಒಳ್ಳೇದವ್ವ ಒಲಿದು ಕುಟ್ಟುವರಿಲ್ಲ

ಸೀರೆ ಒಳ್ಳೇದವ್ವ ಸೆರಗಿಲ್ಲ ಹೆಣ್ಣಿನ

ಗುಣ ಒಳ್ಳೇದವ್ವ ಋಣವಿಲ್ಲ

ಒಳ್ಳೆಯ ಹೆಣ್ಣಿಗೆ ಸರಿಯಾದ ಗಂಡು ದೊರಕದಿದ್ದರೆ ಗುಡ್ಡದ ಕಲ್ಲಿಗೆ ಧಾರೆ ಎರೆದ್ಹಂಗೆ ಹೆಸರು ಬೆಳೆಯನೊಯ್ದು ಕೆಸರಲ್ಲಿ ಚೆಲ್ಲಿದಂತೆ.

ಹೆಣ್ಣನ್ನು ಚೆನ್ನಾಗಿ ಬಾಳಿಸದವನಿಗೆ ಸಮಾಜದಲ್ಲಿ ಗೌರವವಿಲ್ಲ, ಕಂಡವರ ಹೆಣ್ಣ ಮದುವೆಯಾಗಿ ಗೋಳ ಹೊಯ್ಯುವರು, ಹೆಣ್ಣುಗಳೆಲ್ಲ ಬಯಸುವುದು ಅನುಕೂಲ, ಒಳ್ಳೆಯ ದಾಂಪತ್ಯ ಮುತ್ತಿನಂಥ ಪತಿಯನ್ನು ಹೀಗೆ ಕೇಳಿಕೊಳ್ಳುತ್ತ ಬಳಗ ಬಿಟ್ಟು ಬಂದಿಹೆನು ಕದನವ ಕಟ್ಟಿ ಹೋಗಲುಬೇಡಿ ಎಂದು ಹೆಂಡತಿ ಬೇಡುವಳು.

ಗಂಡ ಸರಿಯಾಗಿದ್ದರೂ ಅವಿಭಕ್ತ ಕುಟುಂಬಗಳಲ್ಲಿ ಇತರರು ಹೊರಗಿನಿಂದ ಬಂದ ಹೆಣ್ಣಿಗೆ ಬಹಳ ಹಿಂಸೆ ಕೊಡುತ್ತಾರೆ. ಅತ್ತೆಯ ಮನೆಯಲ್ಲಿ ಮೈದುನ, ನಾದಿನಿ ತಾಯಿಯ ಮನೆಯಲ್ಲಿ ಅತ್ತಿಗೆ, ಗಂಡ ಬೈದರೆ ಹೆಂಡತಿ ಸಹಿಸಿಕೊಳ್ಳುತ್ತಾಳೆ. ಗಂಡನ ಮನೆಯಲ್ಲಿ ಮೈದುನ, ನಾದಿನಿ ಕಾಡಿದರೆ ತಾಯಿಯ ಮನೆಯಲ್ಲಿ ಅತ್ತಿಗೆ ಕಾಡುತ್ತಾಳೆ. ಈ ರೀತಿಯಾಗಿ ಅತ್ತಿಗೆಯ ಮೇಲಿನ ತಿರಸ್ಕಾರದಿಂದ ಅಣ್ಣನು ಅವಳ ಕೈಗೊಂಬೆಯಾಗುವನು.

ಹೆಣ್ಣಿಗೆ ತನ್ನ ಜೀವನದಲ್ಲಿ ಯಾವುದೇ ರೀತಿಯ ಅನ್ಯಾಯವಾದರೆ ಅವಳು ಅದನ್ನು ಪ್ರತಿಭಟನೆ ಮಾಡುತ್ತಾಳೆ. ಕಷ್ಟ ನಷ್ಟ, ನೋವು-ನಲಿವು ಮುಂತಾದ ಯಾವುದೇ ಸಂಕಟಗಳನ್ನು ಆಕೆ ಪ್ರತಿಭಟಿಸುತ್ತಾಳೆ. ಅನ್ಯಾಯ, ಕಿರುಕುಳ, ಹಿಂಸಾಚಾರ, ಕೌಟುಂಬಿಕ ಹಿಂಸೆ, ದಾಂಪತ್ಯದಲ್ಲಿ ಕಲಹ, ಬಂಜೆತನ, ವೈಧವ್ಯ ಅಲ್ಲದೇ ಅತ್ತೆಯ ಮನೆಯಲ್ಲಿ ಕಷ್ಟ ಕೋಟಲೆಗಳನ್ನು ಅನುಭವಿಸುತ್ತಾಳೆ. ಇಂಥ ಸಂದರ್ಭಗಳಲ್ಲಿ ಹೆಣ್ಣಿನ ಪ್ರತಿಭಟನೆ ವ್ಯಕ್ತವಾಗಿರುವುದು ಕಂಡುಬAದಿದೆ.

ಈ ರೀತಿಯಾಗಿ ಜನಪದ ಗೀತೆಗಳಲ್ಲಿ ಹೆಣ್ಣಿನ ಪ್ರತಿಭಟನೆ ಕುರಿತು ವಿವರಿಸಬಹುದು.

ಅಧ್ಯಾಯ-೫. ಸಂಪ್ರದಾಯ ಆಚರಣೆಗಳ ಹಿನ್ನಲೆಯಲ್ಲಿ ಹೆಣ್ಣಿನ ಶೋಷಣೆ

ಜನಪದ ಗೀತೆಗಳಲ್ಲಿ ಹೆಣ್ಣಿನ ಜೀವನದ ಹಂತಗಳಾದ ಅತ್ತೆ ಮನೆಯ ಕಷ್ಟ, ಮನಸ್ತಾಪಗಳು, ಸತಿ-ಪತಿಯರ ಮಧ್ಯದ ಸರಸ-ವಿರಸ, ಬಂಜೆತನ, ವೈಧವ್ಯ ಮುಂತಾದ ಸಂಗತಿಗಳು ಕಂಡುಬರುತ್ತವೆ. ಹೆಣ್ಣಿಗೆ ಕೆಲವೊಂದು ಹಳೆಯ ಸಂಪ್ರದಾಯದAತೆ ಕಟ್ಟುಪಾಡುಗಳನ್ನು ವಿಧಿಸಲಾಗಿದೆ. ಹೆಣ್ಣು ಗಂಡನ ಮನೆಯಲ್ಲಿ ಎಂಥದೆ ಸಂಕಷ್ಟಗಳಿದ್ದರೂ ಅನುಸರಿಸಿಕೊಂಡು ಹೋಗುವುದು, ಹೆಣ್ಣು ತುಂಬಾ ಶೋಷಣೆ, ದೌರ್ಜನ್ಯ, ಕಿರುಕುಳ, ಹಿಂಸೆ ಅನುಭವಿಸುತ್ತಾಳೆ. ಹೆಣ್ಣಿಗೆ ಕೆಲವು ಆಚರಣೆಗಳು ಶೋಷಣೆಗೆ ಗುರಿಪಡಿಸಿರುವುದನ್ನು ಕಾಣುತ್ತೇವೆ. ಹೀಗೆ ಈ ರೀತಿಯಲ್ಲಿ ಸಂಪ್ರದಾಯ, ಆಚರಣೆಗಳ ಹಿನ್ನೆಲೆಯಲ್ಲಿ ಹೆಣ್ಣು ಶೋಷಣೆಗೆ ಒಳಗಾಗುತ್ತಾಳೆ.

ಕೆರೆಗೆ ಹಾರ ಕಥನ ಗೀತೆಗಳಲ್ಲೇ ಬಹಳ ಪ್ರಸಿದ್ಧವಾದುದು. ಹೃದಯ ವಿದ್ರಾವಕವಾದ ದುರಂತ ಗೀತೆ. ಹೆಣ್ಣನ್ನು ಒಂದು ವಸ್ತುವಾಗಿ ಬಳಸಿರುವುದು ಇಲ್ಲಿ ಎದ್ದು ಕಾಣುವ ಅಂಶ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಮೂಲ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕಾದ ಅನಿವಾರ್ಯತೆಯನ್ನು ಈ ಕಥನ ಗೀತೆ ಪ್ರಸ್ತುತಪಡಿಸುತ್ತದೆ. ಭಾರತೀಯ ಜಾನಪದ ಸಾಹಿತ್ಯದಲ್ಲಿ ತ್ಯಾಗ, ಬಲಿದಾನಕ್ಕೆ ಸಂಬAಧಿಸಿದ ಕಥನ ಗೀತೆಗಳು ಸಾಕಷ್ಟು ದೊರೆತಿವೆ. ಇಲ್ಲಿ ಹೆಣ್ಣಿನ ಬಹುಮುಖಗಳ ಅನಂತದರ್ಶನ ಅನಾವರಣಗೊಂಡಿದೆ.

ಕೆರೆಗೆ ಹಾರ ಕಥನ ಗೀತೆಯ ಜ್ಯೋತಿಷಿ ನಿಮ್ಮ ಮನೆತನದ ಹಿರಿಯಸೊಸೆ ಮಲ್ಲವ್ವನ ಕೆರೆಗೆ ಹಾರ ಕೊಟ್ಟರೆ ಕೆರೆಯಲ್ಲಿ ನೀರು ಬಂದೇ ಬರುತ್ತದೆಂದು ಹೇಳಿದಾಗ ದೃತಿಗೆಟ್ಟ ಗೌಡ ತನ್ನ ಹೆಂಡತಿಯೊAದಿಗೆ ವಿಷಯದ ಗಂಭೀರತೆಯ ಬಗ್ಗೆ ಸಮಾಲೋಚನೆ ನಡೆಸುವನು. ಹಿರಿಸೊಸೆ ಕೊಟ್ಟರೆ ಹಿರಿತನಕ್ಕೆ ಯಾರಿಲ್ಲ, ಕಿರಿಸೊಸೆ ಭಾಗೀರಥಿಯನ್ನು ಕೆರೆಗೆ ಹಾರ ಕೊಡಲು ನಿರ್ಧರಿಸುತ್ತಾರೆ.

ಇಲ್ಲಿ ಭಾಗೀರಥಿ ಅತ್ತೆ-ಮಾವನ ಮಾತನ್ನು ಮೀರದ ಸೊಸೆ. ಅವಳು ಪ್ರತಿಭಟನೆ ಮಾಡದೆ ಕೊನೆಗೂ ಶೀತಲ ಪ್ರವೃತ್ತಿಯನ್ನು ಕಾಯ್ದುಕೊಳ್ಳುತ್ತಾಳೆ. ಇಲ್ಲಿ ಆಕೆಯ ಮಾನಸಿಕ ವೇದನೆ, ತಾಕಲಾಟ, ತಲ್ಲಣದ ತೀವ್ರತೆ ತವರಿನಲ್ಲಿರುವ ಗೆಳತಿಯನ್ನು ಕಾಣಲು ಹೋದಾಗ ವ್ಯಕ್ತವಾಗುತ್ತದೆ.

ಕಥನ ಗೀತೆಯ ಅಂತಿಮಘಟ್ಟ ಕೆರೆಯ ಆವರಣ ಬಯಲಿನಂತೆ ಬರಡಾಗಿದ್ದು, ಕೆರೆಯ ಅಂಗಳದೊಳಗೆ ಗಂಗಾ ಪೂಜೆಯ ವಿಧಿವಿಧಾನಗಳು ಬಾಗೀನ ಕೊಡುವ ಕರ್ಯಕ್ರಮ ನಡೆಯುವುದು. ಊಟದ ನಂತರ ಉದ್ದೇಶಪೂರ್ವಕವಾಗಿ ಬಂಗಾರದ ಬಟ್ಟಲನ್ನು ಕೆರೆಯ

ತೀರದಲ್ಲಿ ಮರೆತು ಬರುವರು. ಬಂಗಾರದ ಬಟ್ಟಲು ಜೀವನಮೌಲ್ಯ ತಿಳಿಸಿಕೊಡುತ್ತದೆ. ಭಾಗೀರಥಿ ಬಂಗಾರದ ಬಟ್ಟಲನ್ನು ಕೆರೆಯಿಂದ ತೆಗೆದುಕೊಂಡು ಬರುವ ಸಂದರ್ಭದಲ್ಲಿ ಗಂಗೆ ಆರ್ಭಟಿಸಿ ಭಾಗೀರಥಿಯನ್ನು ತನ್ನೊಳಗೆ ಸೆಳೆದೊಯ್ಯುತ್ತಾಳೆ.

ಈ ಕಥನ ಗೀತೆ ಭಾಗೀರಥಿಯ ಸಾವಿನೊಂದಿಗೆ ಮುಕ್ತಾಯವಾಗದೆ ಮುಂದುವರೆಯುತ್ತದೆ. ಭಾಗೀರಥಿ ಕೆರೆಗೆ ಹಾರ ಆಗುವ ಸಂದರ್ಭದಲ್ಲಿ ಗಂಡ ಸೈನ್ಯದಲ್ಲಿರುತ್ತಾನೆ. ಹೆಂಡತಿ ಕೆರೆಗೆ ಹಾರ ಆದ ಸಂದರ್ಭದಲ್ಲಿ ಗಂಡನಿಗೆ ದುಸ್ವಪ್ನ ಬೀಳುತ್ತದೆ. ಶಲ್ಯ ಸುಟ್ಟಂಗಾಯ್ತು, ಕೋಲು ಮುರಿದಂಗಾತು.

ಈ ರೀತಿಯಾಗಿ ಸಂಪ್ರದಾಯ, ಆಚರಣೆಗಳ ಹಿನ್ನೆಲೆಯಲ್ಲಿ ಹೆಣ್ಣಿನ ಶೋಷಣೆಯು ವ್ಯಕ್ತಗೊಂಡಿದೆಯಲ್ಲದೆ ಕೆರೆಗೆ ಹಾರ ಎಂಬ ಕಥನ ಗೀತೆಯಲ್ಲಿ ಭಾಗೀರಥಿಯ ಪಾತ್ರವು ಶೋಚನೀಯವಾಗಿದೆ, ಭಾಗೀರಥಿಯು ಶೋಷಣೆಗೆ ಒಳಗಾಗುತ್ತಾಳೆ. ಹೀಗೆ ಜಾನಪದ ಗೀತೆಗಳಲ್ಲಿ ಹೆಣ್ಣಿಗೆ ಆಗುವ ಶೋಷಣೆಯ ಬಗ್ಗೆ ವಿವರಿಸಲಾಗಿದೆ.

ಸಮಾರೋಪ

ಜನಪದ ಸಾಹಿತ್ಯವು ಪುರಾತನವಾದುದು. ಜನಪದರು ಕಟ್ಟಿದ ಸಾಹಿತ್ಯದಲ್ಲಿ ತತ್ವಜ್ಞಾನವಿದೆ. ಬದುಕಿನ ಅವಿನಾಭಾವ ಸಂಬAಧವಿದೆ. ಧಾರ್ಮಿಕ ಆಯಾಮ ಇದೆ. ನಾಡಿನ ಪರಂಪರಾನುಗತವಾಗಿ ಸಂಸ್ಕೃತಿಯ ಸತ್ವ ಎಲ್ಲವನ್ನು ಹೀರಿಕೊಂಡಿರುವ ಜನಪದ ಸಾಹಿತ್ಯವು ಸಾವಿರಾರು ವರ್ಷಗಳಿಂದ ಔಚಿತ್ಯಪೂರ್ಣವಾಗಿರುವ ಜನಪದ ತ್ರಿಪದಿಗಳಲ್ಲಿ ತನ್ನ ಅನುಭವ ಜನ್ಯ, ಜನಜೀವನದ ರಸಾನುಭೂತಿಯನ್ನು ಉಳಿಸಿಕೊಂಡು ಬಂದ ಶ್ರೀಮಂತಿಕೆ ಜನಪದ ಸಾಹಿತ್ಯಕ್ಕಿದೆ.

ಜನಪದ ಗೀತೆಗಳಲ್ಲಿ ಅನಾವರಣಗೊಂಡ ಹೆಣ್ಣಿನ ಜೀವನದ ವಿವಿಧ ಹಂತಗಳು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ತವರುಮನೆಯಲ್ಲಿ ಬಾಲ್ಯ ಕಳೆದ ಸುಕೋಮಲ ಸ್ವಭಾವದ ಹೆಣ್ಣು ತನ್ನ ಯೌವ್ವನಕ್ಕೆ ಕಾಲಿಟ್ಟಾಗ ಅವಳನ್ನು ಬೇರೆ ಮನೆಗೆ ಮದುವೆ ಮಾಡಿಕೊಡಬೇಕಾದ ಅನಿವರ್ಯತೆ ಇರುತ್ತದೆ. ತವರುಮನೆಯಲ್ಲಿ ಅವಳು ಅಣ್ಣ-ತಮ್ಮ, ತಾಯಿ-ತಂದೆಯವರ ಜೊತೆಗೆ, ಗೆಳತಿಯರ ಜೊತೆಗೆ ಕಳೆದ ಮಧುರ ಕ್ಷಣಗಳನ್ನು ಮರೆತು ಕೊಟ್ಟ ಮನೆಗೆ ವಂಶೋದ್ದಾರ ಮಾಡಬೇಕಾದ ಜವಾಬ್ದಾರಿ ಹೊರುತ್ತಾಳೆ. ಆದರೆ ಕೆಲವೊಮ್ಮೆ ಗಂಡನಮನೆ ನರಕವಾಗಿ ಪರಿಣಮಿಸುವ ಸಂದರ್ಭಗಳಿವೆ. ಬಂಜೆತನ, ವೈಧವ್ಯ, ಸವತಿ ಮತ್ಸರ ಇಂಥ ಕಠಿಣ ಜೀವನದ ಅನುಭವಗಳನ್ನು ಅವಳು ಎದುರಿಸಬೇಕಾಗುತ್ತದೆ. ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಅವಳು ಅನೇಕ ಸಂದರ್ಭಗಳಲ್ಲಿ ಬಲಿಪಶುವಾಗುತ್ತಾಳೆ. ಭಾಗೀರಥಿ, ಉತ್ತರೆ, ಕಾಶಿಬಾಯಿ ಮೊದಲಾದ ಗರತಿಯರು ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಬಲಿಪಶು ಆಗಿದ್ದಾರೆ. ಇಷ್ಟೆಲ್ಲ ಶೋಷಣೆಯ ನಡುವೆಯೂ ಅವಳು ಆಗೊಮ್ಮೆ ಈಗೊಮ್ಮೆ ಪ್ರತಿಭಟನೆಯನ್ನು ತೋರಿಸಿದ್ದಾಳೆ. ಆದರೆ ಆ ಧ್ವನಿ ಕ್ಷೀಣವಾದುದು. ಇಂದಿನ ಮಹಿಳಾ ಪ್ರಜ್ಞೆಗೆ ಹೋಲಿಸಿದರೆ ಅದು ನಮಗೆ ದುರ್ಬಲವಾಗಿ ಕಂಡುಬರುತ್ತದೆ.

ಅಧ್ಯಯನ ಫಲಿತಗಳು

- ಜನಪದ ಗೀತೆಗಳಲ್ಲಿ “ಗರತಿಯ ಹಾಡು” ಕುರಿತು ಮುಖ್ಯ ಧೋರಣೆಗಳನ್ನು ಹೇಳಲಾಗಿದೆ.
- ಜನಪದ ಗೀತೆಗಳಲ್ಲಿ ಬರುವ ಹೆಣ್ಣಿನ ಜೀವನದ ಪಾತ್ರಗಳಾದ ತವರುಮನೆ, ತಂದೆ-ತಾಯಿ, ಅಕ್ಕ-ತಂಗಿ, ಗೆಳತಿ ಹಲವು ಪಾತ್ರಗಳು ಚೆನ್ನಾಗಿ ಮೂಡಿ ಬಂದಿವೆ.
- ಜನಪದ ಗೀತೆಗಳಲ್ಲಿ ಹೆಣ್ಣಿನ ಶೋಷಣೆ, ಕಷ್ಟ ದುಃಖ, ನೋವು-ನಲಿವುಗಳನ್ನು ಕಾಣಬಹುದು.
- ಜನಪದ ಗೀತೆಗಳಲ್ಲಿ ಹೆಣ್ಣಿನ ದಾಂಪತ್ಯದಲ್ಲಿ ಬರುವ ಅಸಮ ದಾಂಪತ್ಯ, ಬಂಜೆತನ, ವಿಧವೆ, ಸವತಿ ಮುಂತಾದ ಅಂಶಗಳ ಕುರಿತು ಹೇಳಲಾಗಿದೆ.
- ಜನಪದ ಗೀತೆಗಳಲ್ಲಿ ಕೆಲವು ಸಂಪ್ರದಾಯ, ಆಚರಣೆಗಳ ಹಿನ್ನಲೆ ವ್ಯಕ್ತಗೊಂಡಿರುವುದನ್ನು ಕಾಣಬಹುದು

ಗ್ರಂಥಋಣ

೧. ಗರತಿಯ ಹಾಡು - ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದವರು.

೨. ಕನ್ನಡ ಜನಪದ ಗೀತೆಗಳು – ಡಾ.ಬಿ.ಎಸ್. ಗದ್ದಗಿಮಠ

೩. ಮಲ್ಲಿಗೆ ದಂಡೆ – ಕಾಪಸೆ ರೇವಪ್ಪ

೪. ಜೀವನ ಸಂಗೀತ - ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ

೫. ಜನತಾ ಗೀತೆಗಳು - ಡಾ.ಬಿ.ಎಸ್. ಗದ್ದಗಿಮಠ

೬. ಲೋಕ ಗೀತೆಗಳು - ಡಾ.ಬಿ.ಎಸ್. ಗದ್ದಗಿಮಠ

೭. ಜನಪದ ತ್ರಿಪದಿ ಸಂಗ್ರಹ - ಶ್ರೀಮತಿ ವೀಣಾದೇವಿ ಕೋಹಳ್ಳಿ

೮. ಜಾನಪದ ಜೀವಾಳ – ಡಾ.ಎಂ.ಎನ್. ವಾಲಿ

೯. ಜನಪದ ಹಾಡುಗಳು – ಎಸ್.ಜಿ. ಕೋಟಿ ಹಾಗೂ ಪ್ರಕಾಶ ಖಾಡೆ

೧೦. ಸಾವಿರದ ಜನಪದ ಗೀತೆಗಳು - ಡಾ.ಎಂ.ಎನ್. ವಾಲಿ

ಸಂಶೋಧನಾ ವಿದ್ಯಾರ್ಥಿನಿ ಮಾರ್ಗದರ್ಶಕರು